ಕರ್ನಾಟಕ ಸರ್ಕಾರ

**ಆಯುಕ್ತರ ಕಚೇರಿ , ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ : DPI-CPI0RTE(REM)/25/2022 ದಿನಾಂಕ : 03.10.2022

**ಸುತ್ತೋಲೆ**

ವಿಷಯ : ಆರ್.ಟಿ.ಇ. ಶುಲ್ಕ ಮರುಪಾವತಿಗೆ ಬೇಡಿಕೆ ಸಲ್ಲಿಸಲು ತಂತ್ರಾಂಶ ಬಿಡುಗಡೆ ಹಾಗೂ ಬೇಡಿಕೆ ಪ್ರಸ್ತಾವನೆಗಳ ತ್ವರಿತ ಇತ್ಯರ್ಥದ ಬಗ್ಗೆ.

ಉಲ್ಲೇಖ : 1. ಈ ಕಚೇರಿ ಸುತ್ತೋಲೆ ಸಂಖ್ಯೆ : ಸಿ7(8)/ಆರ್.ಟಿ.ಇ./ಶು.ಮ.ತಂತ್ರಾಂಶ/2019-20 ದಿನಾಂಕ : 20.11.2019

2. ಈ ಕಚೇರಿ ಸುತ್ತೋಲೆ ಸಂಖ್ಯೆ : ಸಿ7(8)/ಆರ್.ಟಿ.ಇ./ಶು.ಮ./ತಂ.ಬಿಡು/2020-21 ದಿನಾಂಕ : 02.01.2021

3. ಈ ಕಚೇರಿ ಸುತ್ತೋಲೆ ಸಂಖ್ಯೆ : ಸಿ7(8)/ಆರ್.ಟಿ.ಇ./ಶು.ಮ./ತಂ.ಬಿ/2021-22 ದಿನಾಂಕ : 16.11.2021

* * * * *

ವಿಷಯದನ್ವಯ ಆರ್.ಟಿ.ಇ. ಕಾಯ್ದೆ 2009ರ ಸೆಕ್ಷನ್ 12(1)(ಸಿ)ರಡಿ ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಪ್ರವೇಶ ಪಡೆದಿರುವ ಮಕ್ಕಳ 2019-2020, 2020-21,2021-22ನೇ ಸಾಲಿನ ಆರ್.ಟಿ.ಇ. ಮಕ್ಕಳ ಶುಲ್ಕ ಮರುಪಾವತಿಯನ್ನು ಸಂಬಂಧಿಸಿದ ಖಾಸಗಿ ಅನುದಾನರಹಿತ ಶಾಲೆಗಳಿಗೆ ಮಂಜೂರು ಮಾಡಲು ಆಯಾ ಶೈಕ್ಷಣಿಕ ವರ್ಷಗಳಲ್ಲಿಯೇ ತಂತ್ರಾಂಶವನ್ನು ಬಿಡುಗಡೆ ಕಾಲಮಿತಿ ನಿಗಧಿಗೊಳಿಸಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ವಿವರಗಳನ್ನು ಸುತ್ತೋಲೆಗಳ ಮುಖಾಂತರ ನೀಡಲಾಗಿತ್ತು ಹಾಗೂ ಬೇಡಿಕೆ ಸಲ್ಲಿಕೆಗೆ ಅಂತಿಮ ದಿನಾಂಕವನ್ನು ಹಲವಾರು ಬಾರಿ ವಿಸ್ತರಣೆ ಮಾಡಿ ಪ್ರಸ್ತುತ ತಂತ್ರಾಂಶವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಪ್ರಸ್ತುತ 2022-23ರ ಶೈಕ್ಷಣಿಕ ವರ್ಷ ನಡೆಯುತ್ತಿದ್ದು, ಪ್ರಸಕ್ತ ಸಾಲಿನಲ್ಲಿಯೂ ಮೇಲ್ಕಂಡ ವರ್ಷಗಳ ಅಂದರೆ 2019-20, 2020-21 ಮತ್ತು 2021-22ನೇ ಸಾಲಿನ ಆರ್.ಟಿ.ಇ. ಶುಲ್ಕ ಮರುಪಾವತಿ ಪ್ರಕ್ರಿಯೆಯು ಸಂಪೂರ್ಣವಾಗಿ ಮುಕ್ತಾಯವಾಗದೆ ವಿವಿಧ ಹಂತಗಳಲ್ಲಿ ಅಂದರೆ ಶಾಲೆ/ ಕ್ಷೇತ್ರ ಶಿಕ್ಷಣಾಧಿಕಾರಿಗಳು/ಉಪನಿರ್ದೇಶಕರು(ಆಡಳಿತ)/ಅಪರಆಯುಕ್ತರು/ಆಯುಕ್ತರು ಹಂತಗಳಲ್ಲಿ ಉಳಿಕೆ ಇರುವುದು ಕಂಡಿಬಂದಿರುತ್ತದೆ. ಇದರಿಂದಾಗಿ ಶುಲ್ಕ ಮರುಪಾವತಿಗೆ ಸರ್ಕಾರದಿಂದ ಬಿಡುಗಡೆ ಆಗಿರುವ ಅನುದಾನದ ಪ್ರಗತಿಯೂ ಕುಂಠಿತವಾಗಿದೆ. ಈಗಲೂ ಸಹ ಸದರಿ ವರ್ಷಗಳ ಶುಲ್ಕ ಮರುಪಾವತಿ ಬೇಡಿಕೆ ಸಲ್ಲಿಕೆಗೆ ತಂತ್ರಾಂಶ ಬಿಡುಗಡೆಗೆ ಕೋರಿ ಪ್ರಸ್ತಾವನೆಗಳನ್ನು ಸಲ್ಲಿಸುತ್ತಿರುವುದೂ ಸಹ ಕಂಡುಬಂದಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ 2019-20, 2020-21 ಹಾಗೂ 2021-21ನೇ ಸಾಲಿನ ಆರ್.ಟಿ.ಇ. ಶುಲ್ಕ ಮರುಪಾವತಿ ಬಾಕಿಯಿರುವ ಶಾಲೆಗಳಿಗೆ ಏಕರೂಪದಲ್ಲಿ ತ್ವರಿತವಾಗಿ ದಿನಾಂಕ : 31.10.2022ರೊಳಗೆ ಶುಲ್ಕ ಮರುಭರಣವನ್ನು ಮಂಜೂರು ಮಾಡಲು ಒಂದು **"ವಿಶೇಷ ಕಾಲಮಿತಿ ಕ್ರಿಯಾಯೋಜನೆ (Special Drive)-2022"** ನ್ನು ಆಯೋಜಿಸಲಾಗಿದೆ. ಅದರಂತೆ ಶಾಲೆಗಳು ಆರ್.ಟಿ.ಇ. ಮಕ್ಕಳ ಶುಲ್ಕ ಮರುಪಾವತಿಗೆ ಬೇಡಿಕೆ ಸಲ್ಲಿಸಲು ಕೆಳಕಂಡಂತೆ ತಂತ್ರಾಂಶ ಬಿಡುಗಡೆ ಮಾಡಿದೆ.

| ಕ್ರಮ ಸಂಖ್ಯೆ | ವರ್ಷ | ತಂತ್ರಾಂಶ ಬಿಡುಗಡೆ ಮತ್ತು ಶಾಲೆಯವರು ಬೇಡಿಕೆ ಸಲ್ಲಿಸಲು ಅಂತಿಮ ದಿನಾಂಕ |
|---|---|---|
| 1 | 2019-20 | 10.10.2022 ರಿಂದ 13.10.2022 |
| 2 | 2020-21 | 10.10.2022 ರಿಂದ 15.10.2022 |
| 3 | 2021-22 | 10.10.2022 ರಿಂದ 18.10.2022 |

ಮೇಲಿನಂತೆ ಬೇಡಿಕೆಗಳನ್ನು ಇತ್ಯರ್ಥಪಡಿಸಲು ವಿವಿಧ ಹಂತಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳಿಗೆ ನಿಗಧಿಪಡಿಸಿದ ವಿಶೇಷ ಕಾಲಮಿತಿ ವಿವರಗಳ ಅನುಬಂಧ-1ನ್ನು ಇದರೊಂದಿಗೆ ಲಗತ್ತಿಸಿದ್ದು, ಅನುಬಂಧದಲ್ಲಿದ್ದಂತೆ ಕ್ರಮ ಮಾಡಲು ಸೂಚಿಸಿದೆ. ಅದರಂತೆ ದಿನಾಂಕ : 31.10.2022 ಅಂತಿಮ ದಿನಾಂಕವಾಗಿದ್ದು, ಅದರ ನಂತರ 2019-20, 2020-21 ಮತ್ತು 2021-22ರ ಸಾಲಿನ ಯಾವುದೇ ಶುಲ್ಕ ಮರುಪಾವತಿ ಬಾಕಿ ಇಲ್ಲದಂತೆ ಅಗತ್ಯ ಕ್ರಮಕೈಗೊಳ್ಳಲು ಸೂಚಿಸಿದೆ. ಮುಂದಿನ ದಿನಗಳಲ್ಲಿ ಯಾವುದಾದರೂ ಪ್ರಸ್ತಾವನೆಗಳು ಬಾಕಿ ಇದ್ದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನೇ ನೇರಹೊಣೆಗಾರರನ್ನಾಗಿ ಮಾಡಲಾಗುವುದೆಂದು ಅಂತಿಮವಾಗಿ ಸ್ಪಷ್ಟಪಡಿಸಿದೆ.

ವಿ.ಸೂ :- ಶುಲ್ಕ ಮರುಪಾವತಿ ಬೇಡಿಕೆ ಸಲ್ಲಿಕೆ ಮತ್ತು ಇತ್ಯರ್ಥಕ್ಕೆ ಹಿಂದಿನ ಸುತ್ತೋಲೆ, ಜ್ಞಾಪನಗಳಲ್ಲಿನ ಷರತ್ತುಗಳು ಯಥಾವತ್ತಾಗಿ ಮುಂದುರಿಯುತ್ತದೆ.

(ಮಾನ್ಯ ಆಯುಕ್ತರ ಆದೇಶದ ಮೇರೆಗೆ)

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

**ಇವರಿಗೆ,**

1. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು, (ಆಡಳಿತ), ಇವರಿಗೆ ಅಗತ್ಯ ಕ್ರಮಕ್ಕಾಗಿ
2. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಇವರಿಗೆ ಅಗತ್ಯ ಕ್ರಮಕ್ಕಾಗಿ
3. ಸಂಬಂಧಿಸಿದ ಖಾಸಗಿ ಅನುದಾನರಹಿತ ಶಾಲೆಗಳಿಗೆ ಅಗತ್ಯ ಕ್ರಮಕ್ಕಾಗಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ

**ಪ್ರತಿಗಳು,**

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ/ಧಾರವಾಡ ವಿಭಾಗ ಇವರಿಗೆ ಗೌರವಪೂರ್ವಕವಾಗಿ ಮಾಹಿತಿ ಹಾಗೂ ಕ್ರಮಕ್ಕಾಗಿ ಸಲ್ಲಿಸಿದೆ.
4. ಸಾರ್ವಜನಿಕ ಶಿಕ್ಷಣ ಇಲಾಖೆಯ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿ ನಿರ್ದೇಶಕರು, ಬೆಳಗಾವಿ ವಿಭಾಗ ಮತ್ತು ಮೈಸೂರು ವಿಭಾಗ/ಸಹ ನಿರ್ದೇಶಕರು (ಆಡಳಿತ), ಆಯುಕ್ತರ ಕಚೇರಿ, ಕಲಬುರಗಿ/ಸಹಾಯಕ ನಿರ್ದೇಶಕರು, ಕೇಂದ್ರ ಸ್ಥಾನ, ಆಯುಕ್ತರ ಕಚೇರಿ ಬೆಂಗಳೂರು ಇವರಿಗೆ, ಜಿಲ್ಲೆಗಳಿಂದ ಮೇಲು ಸಹಿಗೆ ಸಲ್ಲಿಸಲಾಗುವ ಆರ್.ಟಿ.ಇ. ಶುಲ್ಕ ಮರುಪಾವತಿಯ ಕೆ-2 ಬಿಲ್ಲುಗಳನ್ನು ಆದ್ಯತೆ ಮೇರೆಗೆ ಇತ್ಯರ್ಥಪಡಿಸಲು ಕ್ರಮಕ್ಕಾಗಿ.
5. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ವಿಭಾಗ, ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ತಂತ್ರಾಂಶ ಬಿಡುಗಡೆಗೆ ಹಾಗೂ ಹಾಗೂ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮಕ್ಕಾಗಿ
6. ಹಿರಿಯ ಸಹಾಯಕ ನಿರ್ದೇಶಕರು, ಎಸ್.ಎ.ಟಿ.ಎಸ್. ವಿಭಾಗ, ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಕ್ರಮಕ್ಕಾಗಿ
7. ಕಚೇರಿ ಪ್ರತಿ.

## ಅನುಬಂಧ-1

- ಪ್ರಯುಕ್ತ ತ್ವರಿತ ಆರ್.ಟಿ.ಇ. ಶುಲ್ಕ ಮರುಪಾವತಿಗೆ ರೂಪಿಸಿದ ಒಂದು ವಿಶೇಷ ಕಾಲಮಿತಿ ಕ್ರಿಯಾಯೋಜನೆ (Special Drive)

| ಕ್ರ. ಸಂ. | ವಿವರ | ನಿಗಧಿಗೊಳಿಸಿದ ಅಂತಿಮ ದಿನಾಂಕ | ಕ್ರಮ ಕೈಗೊಳ್ಳಬೇಕಾದ ಅಧಿಕಾರಿ |
|---|---|---|---|
| 1 | ತಾಲ್ಲೂಕಿನಲ್ಲಿ ಬೇಡಿಕೆ ಸಲ್ಲಿಸದ ಶಾಲೆಗಳನ್ನು ಗುರ್ತಿಸಿ, ಶಾಲಾ ಮುಖ್ಯಸ್ಥರ ಸಭೆ ಕರೆದು ಆರ್.ಟಿ.ಇ. ಶುಲ್ಕ ಮರುಪಾವತಿಗೆ ಸಮಜಾಯಿಷಿ ಪಡೆದು ಬೇಡಿಕೆಗಳ ತ್ವರಿತ ಇತ್ಯರ್ಥಕ್ಕೆ ಚರ್ಚಿಸಿ ಕ್ರಮವಹಿಸುವುದು. | 07.10.2022 | ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 2 | ಇತ್ಯರ್ಥಪಡಿಸಿದ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ಸರಿಪಡಿಸಿ ಮೇಲಾಧಿಕಾರಿಗಳಿಗೆ (ಉಪನಿರ್ದೇಶಕರು, ಆಡಳಿತ) ಸಲ್ಲಿಸಲು ಕೊನೆ ದಿನಾಂಕ | 19.10.2022 | ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 3 | ಶುಲ್ಕ ಮರುಪಾವತಿಗೆ ಬೇಡಿಕೆ ಸಲ್ಲಿಸಲು ಸಮಸ್ಯೆಯಿರುವ ಶಾಲೆಗಳ ಸಮಜಾಯಿಷಿ ಪಡೆದು, ವಿವರಗಳನ್ನು ಕ್ರೋಢೀಕರಿಸಿ ಜಿಲ್ಲಾ ಕಚೇರಿಗೆ ಪ್ರಸ್ತಾವನೆ ಸಲ್ಲಿಸುವುದು. | 20.10.2022 | ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 4 | ಅಂತಿಮವಾಗಿ ಪ್ರಸ್ತುತ ತಾಲ್ಲೂಕಿನಲ್ಲಿ ಯಾವುದೇ ಶುಲ್ಕ ಮರುಪಾವತಿಗೆ ಪ್ರಕರಣ ಬಾಕಿ ಇಲ್ಲವೆಂದು ದೃಢೀಕರಣ ನೀಡುವುದು | 21.10.2022 | ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 5 | ಬಿ.ಇ.ಓ. ಗಳಿಂದ ಬಂದ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ಇತ್ಯರ್ಥಪಡಿಸಿ ಕೂಡಲೇ ಮೇಲಾಧಿಕಾರಿಗಳಿಗೆ (ಆಯುಕ್ತರು/ಅಪರ ಆಯುಕ್ತರು ಸಲ್ಲಿಸುವುದು. | 22.10.2022 | ಉಪನಿರ್ದೇಶಕರು (ಆಡಳಿತ) |
| 6 | ಬಿ.ಇ.ಓ.ಗಳಿಂದ ಸ್ವೀಕೃತವಾದ ಶುಲ್ಕ ಮರುಪಾವತಿಗೆ ಸಮಸ್ಯೆಯಿರುವ ಶಾಲೆಗಳ ವಿವರಗಳನ್ನು ಕ್ರೋಢೀಕರಿಸಿ ಈ ಕಚೇರಿಗೆ ವರದಿ ಸಲ್ಲಿಸುವುದು. | 25.10.2022 | ಉಪನಿರ್ದೇಶಕರು (ಆಡಳಿತ) |
| 7 | ಉಪನಿರ್ದೇಶಕರುಗಳಿಂದ ಬಂದ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ಇತ್ಯರ್ಥಪಡಿಸುವುದು | 28.10.2022 | ಆಯುಕ್ತರು/ಅಪರ ಆಯುಕ್ತರು |
| 8 | ಡಿ.ಡಿ.ಪಿ.ಐ.ಗಳಿಂದ ಸ್ವೀಕೃತವಾದ ಶುಲ್ಕ ಮರುಪಾವತಿಗೆ ಬೇಡಿಕೆ ಸಲ್ಲಿಸಲು ಸಮಸ್ಯೆಯಿರುವ ಶಾಲೆಗಳ ಇತ್ಯರ್ಥ | 29.10.2022 | ಆಯುಕ್ತರು/ಅಪರ ಆಯುಕ್ತರು |
| 9 | ಎಲ್ಲಾ ಹಂತಗಳಲ್ಲಿ ಅನುಮೋದನೆಯಾದ ಪ್ರಸ್ತಾವನೆಗಳಿಗೆ ಮಂಜೂರಾತಿ ಆದೇಶ (Sanction Order) ಜನರೇಟ್ ಮಾಡಿ ಸಂಬಂಧಿಸಿದ ಶಾಲೆಗಳ ಬ್ಯಾಂಕ್ ಖಾತೆಗೆ ಶುಲ್ಕ ಮರುಪಾವತಿ ಸಂದಾಯಿಸಲು ಕೊನೆ ದಿನಾಂಕ | 30.10.2022 | ಉಪನಿರ್ದೇಶಕರು (ಆಡಳಿತ) |
| 10 | ಜಿಲ್ಲೆಯಲ್ಲಿ ಯಾವುದೇ ಶುಲ್ಕ ಮರುಪಾವತಿಗೆ ಪ್ರಕರಣ ಬಾಕಿ ಇಲ್ಲವೆಂದು ಹಾಗೂ ಉಳಿಕೆ ಅನುದಾನದ ಕುರಿತಿ ದೃಢೀಕರಣ ನೀಡುವುದು | 31.10.2022 | ಉಪನಿರ್ದೇಶಕರು (ಆಡಳಿತ) |

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)